# **ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಅರಕಲಗೂಡು**

## **ಸಿ ಸಿ ನಂಃ 59/2019**

| | | | | | |
|---|---|---|---|---|---|
| **ಸಾಕ್ಷಿಯ ಹೆಸರು** | ಃ | ಡಾ|| ರವಿಶಂಕರ್ | **ದಿನಾಂಕ** | ಃ | **21/02/2025** |
| **ತಂದೆಯ ಹೆಸರು** | ಃ | ಮಂಜುನಾಥ | **ಸಿ ಡಬ್ಲ್ಯೂ** | ಃ | **07** |
| **ಉದ್ಯೋಗ** | ಃ | ವೈದ್ಯಾಧಿಕಾರಿಗಳು,<br>ಸರ್ಕಾರಿ ಆಸ್ಪತ್ರೆ, ಹೊಳೆನರಸೀಪುರ | **ಪಿ ಡಬ್ಲ್ಯೂ** | ಃ | **05** |
| **ವಿಳಾಸ** | ಃ | ಹೊಳೆನರಸೀಪುರ | | | |

ಸಾಕ್ಷಿಯನ್ನು ದಿನಾಂಕ **21.02.2025** ರಂದು ಕರೆಸಿ **ಪ್ರಮಾಣ ವಚನ ಬೋಧಿಸಲಾಯಿತು.**

### **ಮುಖ್ಯ ವಿಚಾರಣೆ ಸಸಅ ರವರಿಂದ ಃ-**

ನಾನು ಆಗಸ್ಟ್ **2018** ರಿಂದ ಜೂನ್ **2021** ರವರೆಗೆ ವೈದ್ಯಾಧಿಕಾರಿಯಾಗಿ ಅರಕಲಗೂಡು ಸರ್ಕಾರಿ ಆಸ್ಪತ್ರೆಯಲ್ಲಿ ಅರವಳಿಕೆ ವೈದ್ಯಾಧಿಕಾರಿಯಾಗಿ ಕರ್ತವ್ಯ ಮಾಡಿರುತ್ತೇನೆ.

ದಿಃ **06.11.2018** ರಂದು ಮಧ್ಯಾಹ್ನ **3.00** ಗಂಟೆ ಸಮಯಕ್ಕೆ ರೇವಮ್ಮ ಕೋಂ ಈರೇಗೌಡ **,** **42** ವರ್ಷ, ನೈಗೆರೆಕೊಪ್ಪಲು, ಕಸಬಾ ಹೋಬಳಿ, ಅರಕಲಗೂಡು ರವರು ಬಂದು ಅವರ ಮೇಲೆ ಹಲ್ಲೆಯಾಗಿರುವ ಬಗ್ಗೆ ಹೇಳಿರುತ್ತಾರೆ. ಆ ದಿನ ಮದ್ಯಾಹ್ನ ಸುಮಾರು **2.30** ರ ಸಮಯಕ್ಕೆ ಅವರ ಮೇಲೆ ಅವರ ಮನೆಯ ಹತ್ತಿರ ನೈಗೆರೆಕೊಪ್ಪಲು ಹಳ್ಳಿಯಲ್ಲಿ ಅವರ ಹೊಟ್ಟೆ ಭಾಗಕ್ಕೆ ಹಲ್ಲೆಯಾಗಿದೆ ಎಂದು ಹೇಳಿರುತ್ತಾರೆ. ಅವರನ್ನು ಪರೀಕ್ಷಿಸಿದ್ದುಃ-

1. ಅವರ ತಲೆಯ ಮೇಲೆ ನೋವು ಎಂದು ಹೇಳಿರುತ್ತಾರೆ.
2. 2.5 ಸೆಂ ಮೀ ನಷ್ಟು ತರಚಿದ ಗಾಯ ಎಡಕೈ ನ ಮೇಲೆ ಕಂಡುಬಂದಿರುತ್ತದೆ.
3. ಹೊಟ್ಟೆಯನ್ನು ಪರೀಕ್ಷಿಸಿದಾಗ ಹೊಟ್ಟೆಯ ಕೆಳಭಾಗದಲ್ಲಿ ನೋವು ಇರುತ್ತದೆ.

ಸದರಿ ಗಾಯಗಳು ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ.

ಎಪಿಪಿ ರವರು ಮುಂದುವರೆದ ಸಾಕ್ಷಿಗೆ ಕಾಲಾವಕಾಶ ಕೋರಿರುತ್ತಾರೆ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು

ಓ.ಹೇ.ಕೇ.ಸ.ಇದೆ.

ಜೆಎಂಎಫ್‌ಸಿ, ಅರಕಲಗೂಡು